ಕಾಳಜಿ ವಲಯ ಮತ್ತು ಪ್ರಭಾವ ವಲಯ

ಎಲ್ಲ ವ್ಯಕ್ತಿಗಳ ಜೀವನದಲ್ಲಿ ಒಂದಲ್ಲ ಒಂದುರೀತಿಯ ಭಿನ್ನಾಭಿಪ್ರಾಯಗಳು, ಕ್ಲಿಷ್ಟ ಸಮಸ್ಯೆಗಳು ಸಂಸಾರದಲ್ಲಿಯಾಗಲೀ ಕಾರ್ಯಕ್ಷೇತ್ರದಲ್ಲಿ ಅಥವಾ ಸ್ನೇಹಿತರೊಡನೆಯಾಗಲೀ ಇರುತ್ತವೆ ಅಥವಾ ಇರಬಹುದು. ಕೆಲವು ಬಾರಿ ಈ ಸಮಸ್ಯೆಗಳು ಬಹಳ ಚಿಕ್ಕದಾಗಿರುತ್ತದೆ (ಹೆಂಡತಿಯ ಜೊತೆ ಮನಸ್ತಾಪ, ಮಗುವಿಗೆ ಶಿಕ್ಷಕ ರೊಡನೆ ಕಿರಿಕಿರಿ, ಸ್ನೇಹಿತರೊಡನೆ ಕಲಹ ಇತ್ಯಾದಿ). ಮತ್ತೆ ಕೆಲವು ಸಾರಿ ಸಮಸ್ಯೆಗಳು ಬಹಳ ದೊಡ್ಡದಿರಬಹುದು(BEO ಗಳು ಕೊಟ್ಟಿರುವ ಎಚ್ಚರಿಕೆ ಪತ್ರ, ಕೆಲಸದ ವಲಯದಲ್ಲಿ ರಾಜಕೀಯ ಕೈವಾಡ, ಒಂದು ಶಾಲೆಯ ಮುಖ್ಯಶಿಕ್ಷಕರು ಬಹಳ ದಿನ ಕೆಲಸಕ್ಕೆ ಹಾಜರಾಗದೇ ಇರುವುದು ಇತ್ಯಾದಿ) ಇದನ್ನೆಲ್ಲ ನಾವು ಹೇಗೆ ನಿಭಾಯಿಸುತ್ತೇವೆ?

ನಮ್ಮ ಪೂರ್ವ ಅನುಭವ ಈ ವಿಷಯದಲ್ಲಿ ಸಹಾಯಮಾಡುತ್ತದೆ. ಸಾಮಾನ್ಯವಾಗಿ ಇದು ಇಷ್ಟಕ್ಕೇನಿಲ್ಲುವುದಿಲ್ಲ. ಇದೇ ಸಮಸ್ಯೆಯು ಮತ್ತೆ ತಲೆಯೆತ್ತಬಹುದು ಅಥವಾ ಮೊದಲಿನ ಸಮಸ್ಯೆಯಿಂದ ತಲೆ ದೋರಿದ ಮತ್ತೊಂದು ಸಮಸ್ಯೆ ತಲೆಯೆತ್ತಬಹುದು. ಆಗೇನು ಮಾಡಬಹುದು? ಪ್ರತಿ ವ್ಯಕ್ತಿಯೂ ಈ ಕೆಳಗೆ ಕೊಟ್ಟಿರುವ ರೀತಿಯಲ್ಲಿ ಯೋಚಿಸಬಹುದು

1. "ನಾನು ಏನೆಲ್ಲಾ ಮಾಡಬಹುದೋ ಅದನ್ನೆಲ್ಲಾ ಮಾಡಿದ್ದೇನೆ. ಪರಿಸ್ಥಿತಿ ಕೈಮೀರಿತ್ತು ಸನ್ನಿವೇಶ ಹೀಗಿದ್ದಿದ್ದರೆ ಏನಾದರೂ ಮಾಡಬಹುದಿತ್ತು"
2. "ಇದು ನನ್ನ ಕೈಲಿರಲಿಲ್ಲ, ಇದನ್ನೂ ಮೀರಿ ಯೋಚಿಸಲಾಗುವುದಿಲ್ಲ"
3. "ಇದರ ವಿಷಯವಾಗಿ ನಾನು ಏನಾದರೂ ಮಾಡಬಲ್ಲೆ, ನೋಡೋಣ, ಸ್ವಲ್ಪ ಸಮಯ ತೆಗೆದು ಕೊಂಡು ಯೋಚಿಸಿದರೆ ಖಂಡಿತ ಏನಾದರೂ ಮಾಡಬಹುದು"
4. ನಮ್ಮಲ್ಲಿ ಅನೇಕರು ಮೊದಲೆರಡು ಪ್ರತಿಕ್ರಿಯೆಗಳನ್ನು ಹೆಚ್ಚಾಗಿ ಆಯ್ದುಕೊಳ್ಳುತ್ತೇವೆ. ಏಕೆ ?

ಏಕೆಂದರೆ ನಮ್ಮ ಅನುಕೂಲಕ್ಕೆ ತಕ್ಕಂತೆ ಇರುವ, ಕಡಿಮೆ ಸಮಯ ತೆಗೆದು ಕೊಳ್ಳುವ ಹಾಗೂ ಹೆಚ್ಚು ಹೊಣೆಗಾರಿಕೆ/ಜವಾಬ್ದಾರಿ ಇಲ್ಲದ ಉತ್ತರವನ್ನು ನಾವು ಹುಡುಕುತ್ತೇವೆ. ಸನ್ನಿವೇಶವನ್ನು ಅಥವಾ ವ್ಯಕ್ತಿಗಳನ್ನು ಹಳಿಯುತ್ತೇವೆ.

ಕೆಲವರು ಮಾತ್ರ ಮೂರನೆಯ ಪ್ರತಿಕ್ರಿಯೆಯನ್ನು ಆರಿಸಿ ಕೊಳ್ಳುವರು. ಇದು ಒಪ್ಪಿಕೊಂಡವರಿಗೆ ಹೆಚ್ಚು ಜವಾಬ್ದಾರಿ ಮತ್ತು ದುಡಿಮೆ ಕಟ್ಟಿಟ್ಟ ಬುತ್ತಿ. ಯಾವ ಪ್ರವೃತ್ತಿಗೆ ನಾವು ಹೆಚ್ಚಿನ ಅಂಕವನ್ನು ಕೊಡಬಹುದು?

ಡಾ.ಸ್ಟೀವೆನ್ ಕೋವೆ (Stephen Covey) ಅವರು ತಮ್ಮ ಪ್ರಖ್ಯಾತ ಪುಸ್ತಕವಾದ 'The 7 habits of highly effective people ನಲ್ಲಿ ಮೊದಲೆರಡು ಪ್ರತಿಕ್ರಿಯೆಗಳಿಗೆ '**ಪ್ರತಿಕ್ರಿಯಾತ್ಮಕ ಪ್ರವೃತ್ತಿ** ' (Reactive) ಎಂದೂ ಮೂರನೆಯದಕ್ಕೆ **ಪ್ರಕ್ರಿಯಾತ್ಮಕ ಪ್ರವೃತ್ತಿ** (Proactive) ಎಂದೂ ಕರೆಯುತ್ತಾರೆ.

ಪ್ರಕ್ರಿಯಾತ್ಮಕ ಎಂದರೆ ಪೂರ್ವಭಾವಿಯಾಗಿ ಕಾರ್ಯಕ್ರಮವನ್ನು ಕೈ ಗೊಂಡು ಸಂದರ್ಭವೊಂದನ್ನು, ಪರಿಸ್ಥಿತಿಯನ್ನು, ಸೃಷ್ಟಿಸುವ ಅಥವಾ ನಿಯಂತ್ರಿಸುವುದು. ಸ್ಟೀವನ್ ಕೋವೆ ಹೇಳಿರುವಂತೆ, ಪ್ರಕ್ರಿಯಾತ್ಮಕ ಎಂದರೆ " ನಮ್ಮ ಜೀವನ, ಆಯ್ಕೆ ಮತ್ತು ನಾವು ಮಾಡುವ ಕೆಲಸಕ್ಕೆ ನಾವೇ ಜವಾಬ್ದಾರರು. ನಾನು ಮಾಡಬೇಕಾದ ಕಾರ್ಯದ ದಿಕ್ಕನ್ನು ನಾನೇ ನಿರ್ದೇಶಿಸುತ್ತೇನೆ/ನಾನೇ ಕಾರ್ಯೋನ್ಮುಖನಾಗುತ್ತೇನೆ.'

ನಮ್ಮ ಕಾಳಜಿಗಳನ್ನೆಲ್ಲಾ ಒಂದು ವೃತ್ತದೊಳಗೆ ತುಂಬಿಟ್ಟಿರುವಂತೆ ಊಹಿಸಿಕೊಳ್ಳಿ!

ನಮ್ಮ ಆರೋಗ್ಯ, ನಮ್ಮ ಮಕ್ಕಳ ಶಾಲೆ, ಕಾರ್ಯಕ್ಷೇತ್ರದಲ್ಲಿನ ಸಮಸ್ಯೆಗಳು, ವ್ಯವಸ್ಥೆಯಲ್ಲಿನ ಲಂಚ ಕೋರತನ, ಮಳೆಯಿಲ್ಲದೆ ತಲೆ ದೋರಿರುವ ಕ್ಷಾಮ, ಸಹಯೋಗ ಮತ್ತು ಸಹಕಾರವಿಲ್ಲದಿರುವ ಶಿಕ್ಷಕರು, ಸಂಪನ್ಮೂಲದ ಕೊರತೆ ಇತ್ಯಾದಿ. ಈ ವೃತ್ತವನ್ನು **ಕಾಳಜಿ ವಲಯ (circle of concern)** ಎಂದುಸ್ಟೀವೆನ್ ಕರೆಯುತ್ತಾರೆ.

ಮೇಲಿರುವ ಕಾಳಜಿಗಳಲ್ಲಿ ಯಾವುದನ್ನು ನಾವು ಪ್ರಭಾವಿಸಬಹುದು/ ಯಾವ ಕಾಳಜಿಗಳ ಮೇಲೆ ನಾವು ಕಾರ್ಯೋನ್ಮುಖರಾಗಿ ಸಮಸ್ಯೆ ಬಗೆಹರಿಸಲು ಆಗುತ್ತದೆ ಎಂಬುದನ್ನು, ಕಾಳಜಿ ವಲಯ ದೊಳಗೆ ಇನ್ನೊಂದು ವೃತ್ತದಲ್ಲಿ ಹಾಕಿಡಬಹುದು. ಈ ವೃತ್ತವನ್ನು **ಪ್ರಭಾವ ವಲಯ (circle of influence)** ಎಂದು ಸ್ಟೀವೆನ್ ಕರೆಯುತ್ತಾರೆ. ಈ ಪ್ರಭಾವ ವಲಯದಲ್ಲಿರುವ ವಿಷಯಗಳ ನಮ್ಮ ನಿಯಂತ್ರಣದಲ್ಲಿರುತ್ತದೆ. ಅಂದರೆ ಅವುಗಳನ್ನು ನಮ್ಮ ಸಾಮರ್ಥ್ಯಕ್ಕನುಗುಣವಾಗಿ ಪ್ರಭಾವಿಸಬಹುದಾಗಿರುತ್ತದೆ ಹಾಗೂ ನಮ್ಮ ಗುರಿಗಳಿಗೆ ಸಮೀಪವಾಗಿರುತ್ತದೆ.



- **ಪ್ರಕ್ರಿಯಾತ್ಮಕ ವ್ಯಕ್ತಿಗಳು** ತಮ್ಮ ಪ್ರಭಾವ ವಲಯದಲ್ಲಿನ ವಿಷಯಗಳಿಗೆ ಪ್ರಾಮುಖ್ಯತೆ / ಗಮನ ಕೊಡುತ್ತಾರೆ.
- ತಾಯಿತಂದೆಯರನ್ನಾಗಲೀ, ಸನ್ನಿವೇಶವನ್ನಾಗಲೀ, ಅನುವಂಶೀಯ ಗುಣಗಳನ್ನಾಗಲೀ ಹಳಿಯುವುದಿಲ್ಲ.
- ತಮ್ಮ ಜೀವನಕ್ಕೆ ತಾವೇ ಜವಾಬ್ದಾರರು ಎಂದು ಅರಿತಿರುತ್ತಾರೆ. ಯಾವುದೇ ನಿರ್ಧಾರಗಳು ಪ್ರಜ್ಞಾಪೂರ್ವಕವಾಗಿದ್ದು ಮೌಲ್ಯಾಧಾರಿತವಾಗಿರುತ್ತದೆ.
- ಅವಕಾಶಗಳನ್ನು ಸೃಷ್ಟಿಸಿಕೊಂಡು ತಮ್ಮ ಸುತ್ತಲಿನ ಜನರನ್ನು ಸಕಾರಾತ್ಮಕವಾಗಿ ಪ್ರಭಾವಿಸಿ ತಮ್ಮ ಜೀವನದ ಚುಕ್ಕಾಣಿಯನ್ನು ತಾವೇ ಹಿಡಿದು ಪರಿಣಾಮಕಾರಿ ನಾಯಕರಾಗಿ ಉದ್ಭವಿಸುತ್ತಾರೆ.
- ಪ್ರಕ್ರಿಯಾತ್ಮಕ ವ್ಯಕ್ತಿಗಳಿಗೆ ಸಮಸ್ಯೆಗಳು ಇಲ್ಲವೆಂದಲ್ಲ, ಕಿರಿಕಿರಿ ಮಾಡುವ ಮೇಲಧಿಕಾರಿಗಳಿರಬಹುದು, ಜೊತೆಯಲ್ಲಿ ಕೆಲಸ ಮಾಡುವವರ ಕಿರುಕುಳವಿರಬಹುದು, ಮನೆಯವರ ಜೊತೆ ಮುನಿಸಿರಬಹುದು. ಅದನ್ನು ಹೇಗೆ ಸರಿಪಡಿಸಿ ಕೊಳ್ಳಬೇಕೆಂದು ಅವರಿಗೆ ಗೊತ್ತಿರುತ್ತದೆ.
- ಜೀವನದಲ್ಲಿ ಯಾರಿಗೂ ತಮಗೆ ಮುಂಬರುವ ಸುಖದುಃಖಗಳು ಗೊತ್ತಿರುವುದಿಲ್ಲ. ಆದರೆ ಪ್ರಕ್ರಿಯಾತ್ಮಕ ವ್ಯಕ್ತಿಗಳಿಗೆ ಅದಕ್ಕೆ ಪ್ರತಿಕ್ರಿಯಿಸುವುದು ಹೇಗೆಂದು ತಿಳಿದಿರುತ್ತದೆ. ಅವರು ಆ ಘಳಿಗೆಯಲ್ಲಿ ತೆಗೆದು ಕೊಳ್ಳುವ ನಿರ್ಧಾರಗಳು ಭವಿಷ್ಯದಲ್ಲಿ ಸಕಾರಾತ್ಮಕ ಪ್ರಭಾವ ಬೀರುತ್ತದೆ.

ಪ್ರತಿಕ್ರಿಯಾತ್ಮಕ ವ್ಯಕ್ತಿಗಳು: ತಮ್ಮ ಪರಿಸರ, ಸುತ್ತಲಿನ ವ್ಯಕ್ತಿಗಳನ್ನು, ಸನ್ನಿವೇಶವನ್ನು ಹಳಿಯುವುದರ ಜೊತೆಗೆ ತಮ್ಮ ಸೋಲಿಗೆ ಅವುಗಳನ್ನೇ ಹೊಣೆ ಮಾಡುತ್ತಾರೆ.

- ಯೋಚನೆ ಮಾಡಿ ನಿರ್ಧಾರ ತೆಗೆದುಕೊಳ್ಳುವುದಿಲ್ಲ
- ಇತರರ ತಾತ್ಕಾಲಿಕ ಮೌಲ್ಯಗಳನ್ನು ಅನುಸರಿಸುತ್ತಾರೆ
- ಯಾವುದೇ ರೀತಿಯ ಜವಾಬ್ದಾರಿಗಳನ್ನು ತೆಗೆದುಕೊಳ್ಳುವುದಿಲ್ಲ
- ಕಷ್ಟ ಎನಿಸಿದ ಕೆಲಸಗಳನ್ನು ಸುಲಭವಾಗಿ ಕೈ ಬಿಡುತ್ತಾರೆ
- ಕೋಪದಲ್ಲಿದ್ದಾಗ ಉಪಯೋಗಿಸುವ ಭಾಷೆಯ ಮೇಲೆ ಗಮನವಿರುವುದಿಲ್ಲ
- ಇನ್ನೊಬ್ಬರ ಬಲಹೀನತೆಯ ಮೇಲೆ ಗಮನ ಕೇಂದ್ರೀಕೃತ ಗೊಳಿಸುತ್ತಾರೆ

ಈಗ ನಾವು ಪ್ರಕ್ರಿಯಾತ್ಮಕ, ಪ್ರತಿಕ್ರಿಯಾತ್ಮಕ ಪ್ರವೃತ್ತಿಯನ್ನು ಪ್ರಭಾವ ಮತ್ತು ಕಾಳಜಿ ವಲಯಕ್ಕೆ ಬೆಸುಗೆ ಹಾಕಬಹುದೇ? ಈಗ ನಮ್ಮ ಗುರಿಯೇನು? **ನಾವು ನಮ್ಮ ಪ್ರಭಾವ ವಲಯವನ್ನು ವಿಸ್ತರಿಸಿಕೊಳ್ಳಬೇಕು.**

ಇದರ ಅರ್ಥ ಏನೆಂದರೆ ಮೊದಲೇ ಹೇಳಿದಂತೆ ನಮಗೆ ದಿನನಿತ್ಯ ಅನೇಕ ಕಾಳಜಿಗಳಿರುತ್ತದೆ. ಬರೇ ಕಾಳಜಿಗಳಿಂದೇನೂ ಪ್ರಯೋಜನವಿಲ್ಲ. ನಾವು ಅದರ ಬಗ್ಗೆ ಕೆಲಸ ಮಾಡಿ ತೃಪ್ತಿಕರ ಸುಧಾರಣೆ ತರಲು ಸ್ವಲ್ಪ ತಾಣ(Space) ಬೇಕು. ಉದಾ: ನಮ್ಮ ಕಾಳಜಿ ವಲಯದಲ್ಲಿ ೧೦ ವಿಷಯ /ಸಮಸ್ಯೆಗಳಿವೆ ಎಂದಿಟ್ಟು ಕೊಳ್ಳಿ. ಅದರಲ್ಲಿ ನಾವು ಆರನ್ನಾದರೂ ಪ್ರಕ್ರಿಯಾತ್ಮಕವಾಗಿ ಸ್ಪಂದಿಸಿ, ಅಭ್ಯಸಿಸಿ, ಪರಿಹಾರ ಕಂಡುಕೊಂಡಲ್ಲಿ ನಮ್ಮ ಕಾಳಜಿ ವಲಯವು ಕೃಷಿಸಿ ಪ್ರಭಾವ ವಲಯವು ವಿಸ್ತರಿಸುವುದು

ನಮ್ಮ ಪ್ರಭಾವ ವಲಯವನ್ನು ಏಕೆ ವಿಸ್ತರಿಸಬೇಕು?

- ವೈಯಕ್ತಿಕ ಪರಿಣಾಮಕಾರಿತ್ವವನ್ನು ಹೆಚ್ಚಿಸಿ ಕೊಳ್ಳಲು
- ನಮ್ಮ ಸುತ್ತಲಿನ ಜನಗಳಿಗೆ ಪ್ರೇರಕ ಶಕ್ತಿಯಾಗಿ ಅವರ ಮೇಲೆ ಪ್ರಭಾವವನ್ನು ಬೀರಲು
- ನಮ್ಮ ಶೈಕ್ಷಣಿಕ ವ್ಯವಸ್ಥೆಯನ್ನು ಸುಮಾರಿನಿಂದ ಚೆನ್ನಾಗಿದೆ ಎಂಬ ಕಡೆಗೆ ಮತ್ತು ಚೆನ್ನಾಗಿದೆ ಎಂಬುದಕ್ಕಿಂತ ಅತಿ ಚೆನ್ನಾಗಿದೆ ಎಂಬೆಡೆ ಒಯ್ಯುವುದು
- ಭಾಗೀದಾರರ ಭಾಗವಹಿಸುವಿಕೆಯನ್ನು ಪರಿಣಾಮಕಾರಿಯಾಗಿಸುವುದು
- ಪರಿಣಾಮಕಾರಿ ನಾಯಕರಾಗಿ ಹೊರ ಹೊಮ್ಮುವುದು
- ಮಾನವ ಸಂಘಜೀವಿ. ಯಾವುದೇ ಸಾಧನೆಯು ಒಬ್ಬರಿಂದಲೇ ಸಾಧ್ಯವಿಲ್ಲ ಎಂದು ಅರಿತು ಕೊಂಡು ವ್ಯವಸ್ಥೆಯಲ್ಲಿನ ಎಲ್ಲ ಹಂತದ ಭಾಗೀದಾರರಿಗೂ ಅವಕಾಶ ಕೊಟ್ಟು ಅವರ ಸಹಯೋಗದಿಂದ ನಮ್ಮ ಕಾಣ್ಕೆಯನ್ನು ತಲುಪಲು

ನಮ್ಮ ಪ್ರಭಾವ ವಲಯವನ್ನು ವಿಸ್ತರಿಸುವುದು ಹೇಗೆ?

- ಇತರರನ್ನು ನಾವು ಅರ್ಥಮಾಡಿ ಕೊಂಡರೆ ಅವರು ನಮ್ಮನ್ನು ಅರ್ಥಮಾಡಿ ಕೊಳ್ಳುತ್ತಾರೆ. ಇದನ್ನು ಅಭ್ಯಾಸ ಮಾಡಿ ಕೊಳ್ಳಬೇಕು (first understand to be understood)
- ಸ್ಪಷ್ಟವಾದ ಕಾಣ್ಕೆ ಮತ್ತು ಸ್ಫುಟವಾದ ಮೌಲ್ಯಗಳಿರಬೇಕು
- ಸೋಲು ಮತ್ತು ಗೆಲುವುಗಳನ್ನು ಸಮಭಾವದಿಂದ ಕಾಣಬೇಕು. ನಮ್ಮ ಕಾರ್ಯ ಮತ್ತು ನಿರ್ಧಾರಗಳಿಗೆ ನಾವೇ ಜವಾಬ್ದಾರರಾಗಬೇಕು
- ಸಕಾರಾತ್ಮಕ ಮ ನೋಭಾವ ಮತ್ತು ಅಭಿಪ್ರಾಯ ಇರಬೇಕು
- ನುಡಿದಂತೆ ನಡೆಯಬೇಕು (walk the talk)

ಮೇಲೆ ಹೇಳಿರುವ ಗುಣಗಳನ್ನು ಹೊಂದಿರುವ ನಾಯಕರನ್ನು ಪ್ರಕ್ರಿಯಾತ್ಮಕ ನಾಯಕರು ಎಂದು ಕರೆಯುತ್ತಾರೆ. ಈ ರೀತಿಯಾಗಿರುವ ನಾಯಕರು ತಮ್ಮ ಸುತ್ತಲಿನ ಜನರನ್ನು ಪ್ರಭಾವಿಸಿ ಆಲೋಚನಾ ವಿನ್ಯಾಸವನ್ನು ಸಕಾರಾತ್ಮಕವಾಗಿ, ಕಠಿಣ ನಿಯಮನಿಷ್ಠೆಯಿಂದ ಹೊಂದಿ ಕೊಳ್ಳುವ ವ್ಯವಸ್ಥೆಯೆಡೆಗೆ (rigidity to flexibility) ವೈಯಕ್ತಿಕ ಜವಾಬ್ದಾರಿಯ ಬದಲಿಗೆ ಜವಾಬ್ದಾರಿ ಹಂಚಿಕೆಯೆಡೆಗೆ (individual responsibility to shared responsibility) ನಿರ್ವಹಣಾ ಕೌಶಲ್ಯದಿಂದ ನಾಯಕತ್ವದೆಡೆಗೆ (management to leadership) ಬಲವನ್ನು ಸಬಲ ಮಾಡುವೆಡೆಗೆ (power to empower), ಯಶಸ್ವಿಯಾಗಿ ಬದಲಿಸುವರು

ಸ್ಟೀವನ್ ಕೋವೆಯವರ ಈ ಪರಿಕಲ್ಪನೆಯು ಬಹಳ ಯಶಸ್ವಿ ಹಾಗೂ ಶಕ್ತಿಯುತವಾಗಿದೆ. ಇದರ ಉಪಯೋಗವನ್ನು ನಿರ್ವಹಣೆ, ಆಡಳಿತ ವ್ಯವಸ್ಥೆಗಳಲ್ಲಿ, ಶಾಲೆಗಳಲ್ಲಿ, ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ಕ್ರೀಡೆಗಳಲ್ಲಿ, ಗೊತ್ತಿಲ್ಲದೆ ಮನೆಯೊಡತಿಯರು ಕೂಡ ಪಡೆಯುತ್ತಾರೆ. ಈ ಪರಿಕಲ್ಪನೆಯು ಎಲ್ಲ ವ್ಯವಸ್ಥೆಗಳಲ್ಲಿ, ಎಲ್ಲ ಹಂತಗಳಲ್ಲಿ ಅನ್ವಯವಾಗುತ್ತದೆ.